O.S **02/2023**

P.W.2

ಸಾಕ್ಷಿಯನ್ನು ದಿಃ 13-01-2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಬಿ.ವಿ.ಎನ್. ವಾದಿ ಪರ ವಕೀಲರಿಂದ

ನಾನು ನನ್ನ ಮೌಖಿಕ ಸಾಕ್ಷಿಯನ್ನು ಶಪಥ ಪತ್ರದ ರೂಪದಲ್ಲಿ ಈಗ ನ್ಯಾಯಾಲಯದಲ್ಲಿ ಸಲ್ಲಿಸುತ್ತಿದ್ದೇನೆ. ಸದರಿ ಶಪಥ ಪತ್ರದಲ್ಲಿ ಇರುವ ಸಂಗತಿಗಳನ್ನು ನಾನು ಓದಿಸಿ ತಿಳಿದುಕೊಂಡಿರುತ್ತೇನೆ ಆ ಕಾರಣ ಅವುಗಳಲ್ಲಿಯ ಅಂಶಗಳು ನಿಜವಿರುತ್ತದೆ. ಸದರಿ ಅಂಶಗಳನ್ನು ಓದಿಸಿ ತಿಳಿದುಕೊಂಡ ಮೇಲೆ ಒಪ್ಪಿ ನನ್ನ ಸಹಿ ಮಾಡಿರುತ್ತೇನೆ.

ಪಾಟೀ ಸವಾಲುಃ ಶ್ರೀ ವಿ.ಎಸ್.ಪಿ. ಪ್ರತಿವಾದಿ ಪರ ವಕೀಲರಿಂದ

ಪ್ರಮಾಣ ಪತ್ರವನ್ನು ಮುರಿಗೆಪ್ಪ ತಿಳಿಸಿದಂತೆ ಸಲ್ಲಿಸಿರುತ್ತೆನೆಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಯರು ಸುಮಾರು 25 ವರ್ಷದಿಂದ ಪರಿಚಯ ಇರುತ್ತಾರೆ. ಮಹಾದೇವಪ್ಪ ಬಾಳಿಕಾಯಿ ಇವರ ಪರಿಚಯ ಇರುತ್ತದೆ. ಚನ್ನಪ್ಪ ಬಾಳಿಕಾಯಿ 25 ವರ್ಷಗಳಿಂದ ವಡವಿಯಲ್ಲಿ ವಾಸ ಇರುತ್ತಾರೆ. ಸದರಿ ಊರಿನಲ್ಲಿ ವ್ಯವಸಾಯ ಮತ್ತು ಖಾಸಗಿ ಕೆಲಸ ಮಾಡಿಕೊಂಡು ಅಲ್ಲಿಯೇ ವಾಸ ಇರುತ್ತಾರೆಂದರೆ ಸರಿ. ಪ್ರತಿವಾದಿ 1 ಮತ್ತು 2 ರವರು ಸರ್ವೆ ನಂ. 26 ರಲ್ಲಿ ವ್ಯವಸಾಯ ಮಾಡುತ್ತಿದ್ದಾರೆ. ಸುಮಾರು 25 ವರ್ಷದಿಂದ ಅವರೇ ಸ್ವಾಧಿನಾನುಭವದಲ್ಲಿ ಇರುತ್ತಾರೆಂದರೆ ಇರಬಹುದು. ನನಗೆ ಅದರ ಬಗ್ಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ. ಪಂಚಾಯಿತಿಯವರು ಇದರ ಬಗ್ಗೆ ವಿಚಾರಿಸಿದಾಗ ನಾನು ಅದಕ್ಕೆ ಸಹಿ ಹಾಕಿರುತ್ತೇನೆಂದರೆ ಸರಿಯಲ್ಲ.

2.ವಾದಿಯರಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ 3 ಮತ್ತು 4 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ ಕಾರಣ ಪಾಟೀ ಸವಾಲು ಮುಂದೂಡಲಾಯಿತು.)

**(**ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)**

ಓದಿ ಹೇ ಕೇ ಸರಿ ಅದೆ.

Sd/-13.01.2026

ಹಿರಿಯ ದಿವಾಣಿ ನ್ಯಾಯಾಧೀಶರು

ಸಾಕ್ಷಿದಾರರ ಸಹಿಃ Sd/-13.01.2026

**ಹಾಗೂ ಪ್ರ.ದ.ನ್ಯಾ.ದಂ. ಲಕ್ಷ್ಮೇಶ್ವರ**